### ವಿದ್ಯಾರ್ಥಿಗಳಿಗೆ ಒಳ್ಳೆಯ ಗಿಫ್ಟ್!

ಸಹಜವಾಗಿ ನಡೆಯಬೇಕಾದ ಕಲಿಕೆ, ಹಲವಾರು ಕಾರಣಗಳಿಂದ ಒತ್ತಡದಿಂದಲೇ ನಿಭಾಯಿಸಲ್ಪಡುತ್ತಿದೆ. ಶೈಕ್ಷಣಿಕ ವರ್ಷದ ಕೊನೆಯ ಕೆಲವು ತಿಂಗಳುಗಳನ್ನು ವಿದ್ಯಾರ್ಥಿಗಳು, ಶಿಕ್ಷಕರು, ಹೆತ್ತವರು ತಲ್ಲಣದಿಂದಲೇ ಕಳೆಯುವುದನ್ನು ನೋಡುತ್ತಿದ್ದೇವೆ. 'ಅಧ್ಯಯನವೆಂದರೆ ಅಂಕಗಳು ಪಡೆಯುವುದರೊಡನೆ ಮುಗಿದುಬಿಡುವ' ಪ್ರಕ್ರಿಯೆಯಾಗಿ ಬದಲಾಗಿರುವುದರಿಂದ ಈ ಸಮಸ್ಯೆ. ಶಿಕ್ಷಣದ ಕುರಿತ ಲೇಖನ, ಓದಲು, ಪರೀಕ್ಷೆ ಎದುರಿಸಲು, ಒತ್ತಡ ನಿಭಾಯಿಸಲು ಸರಳ ಮಾರ್ಗೋಪಾಯಗಳನ್ನು ನೀಡಿದ ಉತ್ತಮ ಪ್ಲ್ಯಾನರ್. ಚಿಕ್ಕ ಚಿಕ್ಕ ಟಿಪ್ಪಣಿಗಳ ಮೂಲಕ ನೀಡಿದ ಮಾರ್ಗದರ್ಶಿ ಸೂತ್ರಗಳು ಮಕ್ಕಳಿಗೆ ಉಪಯುಕ್ತ. ಆಟ, ಊಟ, ಸೃಜನಶೀಲ ಚಟುವಟಿಕೆಗಳ ಪ್ರಸ್ತಾವವೂ ಗಮನಾರ್ಹ. ಲೇಖನದ ಮೊದಲ ಕೆಲ ಸಾಲುಗಳು 'ವಿದ್ಯೆಯ ನಿಜವಾದ ಮಹತ್ವ ಜೀವನ ಕೌಶಲ ಹೊಂದುವುದು ಅಂಕಗಳಲ್ಲ...' ಎಂಬ ವಿಷಯವನ್ನು ಉದಾಹರಣೆಯ ಮೂಲಕ ಒತ್ತಿ ಹೇಳಿದ್ದು ಇಷ್ಟವಾಯಿತು. ಹೊಸ ಶೈಕ್ಷಣಿಕ ವರ್ಷದ ಆರಂಭದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಹೆತ್ತವರಿಗೆ ನೀಡಿದ ಉತ್ತಮ ಕೊಡುಗೆ ಈ ಲೇಖನ.

—ವೀಣಾ ಜೋಶಿ, ಬಾರ್ಕೂರು

ಕಲಿಕಾವಿಧಾನಗಳ ಮೇಲೆ ಬೆಳಕು ಚೆಲ್ಲಿರುವ ಉತ್ತಮ ಲೇಖನ. ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಸಮಯಕ್ಕೆ ಸರಿಯಾಗಿ ಪ್ರಕಟವಾಗಿರುವುದು ಪ್ಲಸ್ ಪಾಯಿಂಟ್.

—ಕೆ.ವಿ.ರಾಜಲಕ್ಷ್ಮಿ, ಬೆಂಗಳೂರು

### ಗೋಲಬಾವಿ ಬಗ್ಗೆ

ಮೇ 23ರ ಸಂಚಿಕೆಯಲ್ಲಿ ರಾಮಕೃಷ್ಣ ಸಿದ್ರಪಾಲ ಬರೆದ 'ಜಲದ ಗೋಲಬಾವಿ' ಚಿತ್ರ ಲೇಖನ ನಮ್ಮ ಕಣ್ಣು ತೆರೆಸುವ ಹಾಗಿದೆ.

ನಮ್ಮ ಸಂಸ್ಕೃತಿ ಪರಂಪರೆ ಬಹಳ ದೊಡ್ಡದು ಎಂದು ಬೊಬ್ಬೆ ಹೊಡೆಯುವ ನಾವು ನಮ್ಮ ಪ್ರಾಚೀನ ಕಟ್ಟಡಗಳನ್ನು ಮುಂದಿನ ಪೀಳಿಗೆಗೆ ಯಾವ ಸ್ಥಿತಿಯಲ್ಲಿ ದಾಟಿಸುತ್ತಿದ್ದೇವೆ ಎಂದು ಯೋಚಿಸಿದರೆ ನಾಚಿಕೆಯಾಗುತ್ತದೆ. ಇದೊಂದೇ ಜಾಗವಲ್ಲ. ಕರ್ನಾಟಕದ ಹಲವು ಐತಿಹಾಸಿಕ ಸ್ಥಳಗಳಲ್ಲಿ ಇಂತಹ ಅನಾದರವನ್ನು ಕಾಣುತ್ತೇವೆ. ಸರಕಾರವೇ ಮಾಡಲೆಂದು ಜನತೆ ಕಾಯುವುದರ ಬದಲಿಗೆ ಊರಿನ ಜನ ತಾವೇ ಸ್ವಚ್ಛತಾಕಾರ್ಯನ್ನು ಮಾಡಿ ನಮ್ಮ ಐತಿಹಾಸಿಕ ಸ್ಥಳಗಳನ್ನು ಕಾಪಾಡಬೇಕು.

—ಕೊ.ಸು.ನರಸಿಂಹ ಮೂರ್ತಿ
ಚಾಮರಾಜಪುರ

### ಮನಮುಟ್ಟುವ ಹೂರಣ; ಗುಣಮಟ್ಟದ ಮುದ್ರಣ

ಮೇ 23ರ ಸಂಚಿಕೆಯಲ್ಲಿ ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಶಿಕ್ಷಕರಿಗೆ ಭರಪೂರ ಮಾಹಿತಿಯಿತ್ತು. ಅರವಿಂದ ಚೊಕ್ಕಾಡಿ ಅವರ ಲೇಖನದಲ್ಲಿ ಸಮಯದ ಸದುಪಯೋಗ, ಓದುವ ಯೋಜನೆ ರೂಪಿಸಿಕೊಳ್ಳುವ ಬಗ್ಗೆ ವಿಶದವಾಗಿ ತಿಳಿಸಲಾಗಿದೆ.

ಅಮೆರಿಕದಲ್ಲಿ ನಡೆಸುವ 'ಜ್ಯೂನಿಯರ್ ನೊಬೆಲ್' ಸ್ಪರ್ಧೆ ಬಗ್ಗೆ ಓದಿದಾಗ, ನಮ್ಮಲ್ಲಿ ಮಕ್ಕಳಿಗಾಗಿ ಟೀವಿ ವಾಹಿನಿಗಳಲ್ಲಿ ಏರ್ಪಡಿಸುವ ಅನಾರೋಗ್ಯಕರ 'ರಿಯಾಲಿಟಿ ಷೋ'ಗಳ ಬದಲಿಗೆ ಬೌದ್ಧಿಕ ಬೆಳವಣಿಗೆ, ದೈಹಿಕ ಚಟುವಟಿಕೆಗಳಿಗೆ ಪೂರಕವಾಗುವಂತಹ ಆಟೋಟಗಳ ಸ್ಪರ್ಧೆಗಳನ್ನು ಏಕೆ ಆಯೋಜನೆ ಮಾಡಬಾರದು? ಇದರಿಂದ ಭವಿಷ್ಯದಲ್ಲಿ ಉತ್ತಮ ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕಬಹುದಲ್ಲವೇ ಅನಿಸಿತು.

ಕುಲ್ಫಿಯಂತಹ 'ಕುಫ್ರಿ'ಯ ಪರಿಚಯ, ಆ ಸ್ಥಳವನ್ನೊಮ್ಮೆ ಸಂದರ್ಶಿಸಬೇಕೆಂಬ ಆಸೆಯನ್ನು ಹೆಚ್ಚು ಮಾಡಿತು. ಸರ್ಕಾರಿ ನೌಕರಿ ಪಕ್ಕಾ ಆದ ಮೇಲೆಯೂ ಮೈ ಹುರಿಗಟ್ಟಿಸಿದ ಗಟ್ಟಿಮನಸ್ಸಿನ ಪೊಲೀಸ್ ಅರ್ಜುನರ ಕುರಿತ ಲೇಖನ ಇತರರಿಗೆ ಮಾದರಿಯಾಗಿದೆ. 'ವ್ಯಾಲುಯೇಶನ್ ವಗೈರೆಗಳು' ನಗೆ ಬರಿಸುವುದರ ಜೊತೆಗೆ ವಿದ್ಯಾರ್ಥಿಗಳ ಮನೋಭಾವದ ಕುರಿತು ತಿಳಿಸುತ್ತದೆ. ಒಟ್ಟಾರೆ ಹಲವು ಚೆಂದದ ಲೇಖನ, ವಿನ್ಯಾಸಗಳೂ ಸೇರಿ ಉತ್ತಮ ಪೇಪರ್ ಕ್ವಾಲಿಟಿಯೊಂದಿಗೆ 'ಸುಧಾ' ಎಂದಿನಂತೆ ಮೆಚ್ಚುಗೆಯಾಯ್ತು.




— ವಸುಂಧರಾ. ಕೆ. ಎಂ., ಬೆಂಗಳೂರು

### ಅಮೋಘ ಸೇವೆ

ಮಹಿಳಾ ಸಬಲೀಕರಣಕ್ಕೆ ಉತ್ತೇಜನಕಾರಿಯಾದ ಕ್ರಮ ಕೈಗೊಳ್ಳಲು ನಮ್ಮ ರಾಜಕೀಯ ವ್ಯವಸ್ಥೆ ವಿಫಲವಾಗಿದೆ. ಗ್ರಾಮೀಣ ಹೆಣ್ಣುಮಕ್ಕಳ ಆರ್ಥಿಕ ಸ್ವಾಲಂಬನೆಗೆ ಆಸ್ಥೆ ವಹಿಸುತ್ತಿರುವ, ಜೆ.ಎಸ್. ಡಬ್ಲ್ಯೂ. ಸಂಸ್ಥೆಯ ಸಂಸ್ಥಾಪಕಿ, ಸಂಗೀತಾ ಜಿಂದಾಲ್ ಅವರ ಪರಿಶ್ರಮ ಅಪಾರ. ಈ ಕುರಿತು ಉಮಾ ಅನಂತ್ ಮೇ 23ಸಂಚಿಕೆಯಲ್ಲಿ ಬರೆದಿರುವ 'ಸಬಲೀಕರಣದತ್ತ ದಿಟ್ಟ ಹೆಜ್ಜೆ' ಎಂಬ ಲೇಖನ ಚೆನ್ನಾಗಿದೆ. ಹೊಸಪೇಟೆ, ಸಂಡೂರ್, ತೋರಣಗಲ್ಲು, ಆಸುಪಾಸಿನ ಹಳ್ಳಿಗಳ, ಅನಕ್ಷರಸ್ಥ ಹಾಗೂ ಅಕ್ಷರಸ್ಥ, ಹೆಣ್ಣುಮಕ್ಕಳ ಜೀವನವನ್ನು ತಿದ್ದಿ ತೀಡಿ ಅವರ ಜೀವನದಲ್ಲಿ ಬೆಳಕು ಮೂಡುವಂತೆ ಹಾಗೂ ಅವರು ಆರ್ಥಿಕವಾಗಿ ಸ್ವಾಲಂಬಿಯಾಗುವಂತೆ ರೂಪಿಸಿರುವ ಕಾರ್ಯಯೋಜನೆ ಮೆಚ್ಚುಗೆಗೆ ಪಾತ್ರವಾಗುವಂತಹುದು.

—ಎಸ್.ಪ್ರಭಾ, ಬೆಂಗಳೂರು

### ಅಮ್ಮನ ನೆನಪು ನೇವರಿಸುವ ಲೇಖನ

ಯಾವ ಪ್ರತಿಫಲವನ್ನೂ ಅಪೇಕ್ಷಿಸದೇ, ತನ್ನೆಲ್ಲ ನೋವು ಸಂಕಟಗಳನ್ನು ನುಂಗಿಕೊಂಡು, ತನ್ನ ಮಕ್ಕಳ ಒಳಿತಿಗಾಗಿ ದುಡಿಯುವ ಅಮ್ಮನ ಬಗೆಗೆ ಏನು ಹೇಳಿದರೂ ಕಡಿಮೆಯೇ. ಅಂಥವಳನ್ನು ನಿತ್ಯವೂ ಖುಷಿಯಾಗಿರಿಸುವುದೇ ನಾವು ಅವಳಿಗೆ ಕೊಡುವ ಗಿಫ್ಟ್. ಮೇ 16ರ ಸಂಚಿಕೆಯಲ್ಲಿ ಪ್ರಕಟವಾದ 'ಅಮ್ಮನಿಗೇನು ಗಿಫ್ಟ್?' (ಲೇ: ಸ್ವಯಂಪ್ರಭಾ) ಹೀಗೆ ಅಮ್ಮನ ಕುರಿತು ಆಪ್ತಭಾವವನ್ನು ಉದ್ದೀಪಿಸುತ್ತದೆ.

—ವಿಭಾ ಮುರಳೀಧರ್, ತುಮಕೂರು

### ನಂಬಿಕೆ-ಶ್ರದ್ಧೆಗಳ ಲೋಕದ ಚಿತ್ರಣ

ಮೇ 9ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಂ. ಆರ್. ದತ್ತಾತ್ರಿ ಅವರ 'ವಾರಾಣಸಿಯಲ್ಲಿ ಗಂಗೆ, ಬುದ್ಧ, ವಿಶ್ವನಾಥ..' ಲೇಖನ ಗಮನಸೆಳೆಯಿತು. ಮನಸಿನ ಪ್ರಶ್ನೆಗಳು, ಅನುಮಾನಗಳು, ತಲ್ಲಣಗಳು, ನಂಬಿಕೆ–ಶ್ರದ್ಧೆಗಳ ಅಯೋಮಯ ಲೋಕದ ಕುರಿತು ಆಸಕ್ತಿ ಹುಟ್ಟಿಸುವ ಹಾಗಿತ್ತು. ಎಲ್ಲವನ್ನೂ ಹೇಳಿದ ಹಾಗೆ ಅಥವಾ ಏನೂ ಹೇಳದೆ ಹಲವು ದಾರಿಗಳ ಬಿಚ್ಚಿಟ್ಟ ಬರಹವಿದು.

—ಶ್ರೀನಿವಾಸ ಪಿ.ಎನ್., ಹಾಸನ



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in